**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 05.07.2025 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ. ಜೆ ಪಿ ವಕೀಲರಿಂದಃ**

ನಾನು ಈ ದಾವೆಯಲ್ಲಿ 1 ನೇ ವಾದಿ ಇರುತ್ತೇನೆ. ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮುಖಾಂತರ ಸಲ್ಲಿಸಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ನನಗೆ ತಿಳಿದ ಮಾಹಿತಿಯಂತೆ ಸತ್ಯವಾಗಿರುತ್ತವೆ. ಪ್ರಮಾಣ ಪತ್ರವನ್ನು ನಾನು ನೀಡಿದ ಮಾಹಿತಿ ಮೇರೆಗೆ ತಯಾರಿಸಲಾಗಿರುತ್ತದೆ. ಪ್ರಮಾಣ ಪತ್ರವನ್ನು ನನಗೆ ಓದಿ ಹೇಳಲಾಗಿದ್ದು, ಅದನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಗಿರುತ್ತದೆ.

| | |
|---|---|
| **ನಿ.ಪಿ.01** | ದಿಃ21.12.1942 ರ ಕ್ರಯಪತ್ರದ ದೃಢೀಕೃತ ಪ್ರತಿ |
| **ನಿ.ಪಿ.02** | ಉಪವಿಭಾಗಾಧಿಕಾರಿಗಳು ಮೈಸೂರು ಜಿಲ್ಲೆ ಇವರ ಆದೇಶದ ದೃಢೀಕೃತ ಪ್ರತಿ |
| **ನಿ.ಪಿ.03** | ತಹಶೀಲ್ದಾರರು ಟಿ.ನರಸೀಪುರ ಇವರ ಆದೇಶದ ದೃಢೀಕೃತ ಪ್ರತಿ |
| **ನಿ.ಪಿ.04** | ಮುಡುಕನಪುರ ಗ್ರಾಮದ ಸರ್ವೆ ನಂಬರ್ 84/1 ರ ಪಹಣಿ ಪತ್ರಿಕೆ |
| **ನಿ.ಪಿ.05** | ಮುಡುಕನಪುರ ಗ್ರಾಮದ ಸರ್ವೆ ನಂಬರ್ 84/4 ಎ ರ ಪಹಣಿ ಪತ್ರಿಕೆ |
| **ನಿ.ಪಿ.06** | ಮುಡುಕನಪುರ ಗ್ರಾಮದ ಸರ್ವೆ ನಂಬರ್ 84/4 ಬಿ ರ ಪಹಣಿ ಪತ್ರಿಕೆ |
| **ನಿ.ಪಿ. 07** | ಎಂ ಆರ್ ನಂ.ಎಚ್ 3/2018-19 ರಲ್ಲಾದ ಮ್ಯುಟೇಶನ್ ಆದೇಶ |
| **ನಿ.ಪಿ. 08** | ಎಂ ಆರ್ ನಂ.ಎಚ್ 1/2016-17 ರಲ್ಲಾದ ಮ್ಯುಟೇಶನ್ ಆದೇಶ |
| **ನಿ.ಪಿ. 09** | ಎನ್ ಸಿ ಆರ್ ಸ್ವೀಕೃತಿ |

| | |
|---|---|
| **ನಿ.ಪಿ. 10** | ಉಪವಿಭಾಗಾಧಿಕಾರಿಗಳ ನ್ಯಾಯಾಲಯದ ಆದೇಶಪುಟದ ದೃಢೀಕೃತ ಪ್ರತಿ. |
| **ನಿ.ಪಿ. 11** | ದೂರಿನ ಪ್ರತಿ |

ಮುಂದುವರಿದ ಮುಖ್ಯ ವಿಚಾರಣೆಗೆ ವಾದಿಗಳ ಪರ ವಕೀಲರು ಸಮಯ ಕೋರಿದ್ದು, ಕಾಲಾವಕಾಶ ನೀಡಿ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿಯಾಗಿದೆ.

**(ಸಚಿನ್.ಹೆಚ್.ಆರ್)**
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ತಿ.ನರಸೀಪುರ.